



# ಮೌಲ್ಯಮಾಪನಕ್ಕೆ ಪ್ರೀತಿಯ ಸ್ಪರ್ಶ

**ಅಂಕಗಳ ಮೂಲಕ ನಡೆಯುವ ಮೌಲ್ಯಮಾಪನ ವಿದ್ಯಾರ್ಥಿಗಳ ಅರಿವಿನ ಸಾಮರ್ಥ್ಯದ ಒಂದು ಭಾಗವನ್ನಷ್ಟೇ ಒರೆಗೆ ಹಚ್ಚಲು ಸಾಧ್ಯ. ಮಕ್ಕಳ ನಿಜವಾದ ಪ್ರತಿಭೆ ತಿಳಿಯಲು ನಾವು ಬೇರೆಯದೇ ಮಾನದಂಡಗಳನ್ನು ಕಂಡುಕೊಳ್ಳಬೇಕಾಗಿದೆ.**

■ ಸ್ವಯಂಪ್ರಭಾ

ಈಗ ಪರೀಕ್ಷೆಗಳದ್ದೇ ಸುದ್ದಿ. ಮಕ್ಕಳಿಗೆ ಪರೀಕ್ಷೆಗಳು ಬೇಕೇ ಬೇಡವೇ ಎನ್ನುವ ಚರ್ಚೆ ಬಹುಕಾಲದಿಂದ ನಡೆದು ಬಂದಿದ್ದರೂ, ಆ ಕುರಿತು ನಿರ್ಣಯಾತ್ಮಕವಾಗಿ ಮಾತನಾಡುವ ಸಂದರ್ಭ ಈಗ ಬಂದಿದೆ. 'ಸಿಬಿಎಸ್‌ಇ' 12ನೇ ತರಗತಿಯ ಪರೀಕ್ಷೆಗಳನ್ನು ರದ್ದುಮಾಡಿರುವ ಕೇಂದ್ರ ಸರ್ಕಾರದ ನಿರ್ಧಾರ ಪರೀಕ್ಷೆಗಳ ಚರ್ಚೆಗಳಿಗೆ ಮತ್ತಷ್ಟು ಕಾವು ನೀಡಿದೆ.

ಶಾಲಾ ಅವಧಿಯಲ್ಲಿ ಮಕ್ಕಳು ಯಾವೆಲ್ಲಾ ವಿಷಯವನ್ನು ಓದಿ ಕಲಿತುಕೊಂಡಿದ್ದಾರೆ ಎಂಬುದನ್ನು ಅರಿಯಲು ಆಗಾಗ ಪರೀಕ್ಷೆಗಳನ್ನು ನಡೆಸುವುದು ಮೌಲ್ಯಮಾಪನದ ಒಂದು ವಿಧಾನ. ಉದಾಹರಣೆಗೆ, ಅರ್ಥಶಾಸ್ತ್ರ ವಿಷಯವನ್ನು ಓದುವ ಮಕ್ಕಳು, ಆ ವಿಷಯದಲ್ಲಿ ಏನೆಲ್ಲಾ ಅರಿತುಕೊಂಡಿದ್ದಾರೆ ಎಂಬುದು ಮೌಲ್ಯಮಾಪಕರಿಗೆ ಗೊತ್ತಾಗುವುದಾದರೂ ಹೇಗೆ? ಅದನ್ನು ತಿಳಿಯಲಿಕ್ಕಾಗಿ ಪರೀಕ್ಷೆಗಳನ್ನು ನಡೆಸುವುದು ಅನಿವಾರ್ಯ. ಪರೀಕ್ಷೆಗಳಲ್ಲಿ ದೊರೆಯುವ ಅಂಕಗಳೇ ಅರ್ಥಶಾಸ್ತ್ರದಲ್ಲಿ ವಿದ್ಯಾರ್ಥಿಗೆ ಇರುವ ಜ್ಞಾನವೆಷ್ಟು ಎಂಬುದರ ಸಂಕೇತವಾಗಿರುತ್ತದೆ. ಪರೀಕ್ಷೆ ಬೇಕು ಎಂಬ ಕುರಿತ ವಾದವನ್ನು ಬೆಂಬಲಿಸುವ ಮಾತು ಇದಾಯಿತು.

ಶಿಕ್ಷಣವೆಂದರೆ ಮಕ್ಕಳನ್ನು ಪ್ರಜ್ಞಾವಂತ ಪ್ರಜೆಯನ್ನಾಗಿ ರೂಪಿಸುವ ಪ್ರಕ್ರಿಯೆ ಎಂದು ನಂಬುವುದಾದರೆ, ಅರ್ಥಶಾಸ್ತ್ರ ಪಾಠಗಳ ಅಧ್ಯಾಯಗಳನ್ನು ಓದಿ, ಪರೀಕ್ಷೆಯಲ್ಲಿ ಪ್ರಶ್ನೆಗಳನ್ನು ಉತ್ತರಿಸುವುದನ್ನು ಗಮನಿಸಿ ಮೌಲ್ಯಮಾಪಕರು ಮಾಡುವ ನಿರ್ಧಾರಗಳಷ್ಟೇ ಸಾಕೆ? ಅರ್ಥಶಾಸ್ತ್ರ ವಿಷಯದಲ್ಲಿ ಶೇ 90 ಅಂಕ ಗಳಿಸಿದ ವಿದ್ಯಾರ್ಥಿ, ಅಂಗಡಿಯೊಂದಕ್ಕೆ ತೆರಳಿ, ವಿವೇಚನೆಯಿಂದ ದಿನಸಿ ಖರೀದಿಸಿ, ಹಣ ಪಾವತಿಸುವ ಕೌಶಲವನ್ನು, ಅಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುವ ವಿವೇಕವನ್ನು ಕಲಿತಿದ್ದಾನೆಯೇ ಎಂದು ಅರಿಯುವುದು ಹೇಗೆ. ಅಥವಾ ವಾಣಿಜ್ಯ ವಿಷಯದಲ್ಲಿ ಪದವಿ ಪಡೆದರೂ ವಿದ್ಯಾರ್ಥಿಯು ಬ್ಯಾಂಕ್ ವ್ಯವಹಾರ ಅರಿಯದೇ ಇದ್ದರೆ ಏನು ಪ್ರಯೋಜನ?

ಮಕ್ಕಳು ತಾವು ಓದಿದ ಪಠ್ಯವನ್ನು ಬದುಕಿಗೆ ಹೇಗೆ ಅನ್ವಯಿಸಿಕೊಳ್ಳುತ್ತಾರೆ ಎಂಬುದರ ಮೌಲ್ಯಮಾಪನವಾಗಬೇಕು ಎನ್ನುವುದು ಪರೀಕ್ಷೆಯನ್ನು ವಿರೋಧಿಸುವವರ ವಾದ. ಈ ರೀತಿಯ ಮೌಲ್ಯಮಾಪನಕ್ಕಾಗಿ ಸಾಧ್ಯವಿರುವ ವಿವಿಧ ವಿಧಾನಗಳೇನು ಎಂಬುದಕ್ಕೆ ಉತ್ತರ ಸುಲಭವಾಗಿಲ್ಲ. ಇಂತಹ ಅನೇಕ ವಿಷಯಗಳ ಚರ್ಚೆಗೆ ಈಗ ಅವಕಾಶಗಳು ಸೃಷ್ಟಿಯಾಗಿವೆ ಮತ್ತು ಆ ನಿಟ್ಟಿನಲ್ಲಿ ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಶಿಕ್ಷಣ ತಜ್ಞರು ಲಭ್ಯವಿರುವ ಸಾಧ್ಯತೆಗಳನ್ನು ಪರಿಶೀಲಿಸುವುದು ಅಗತ್ಯವಾಗಿದೆ.

ಮೌಲ್ಯಮಾಪನ ಎನ್ನುವುದು ಬಹಳ ನಾಜೂಕಾದ ಪ್ರಕ್ರಿಯೆ. ಶಾಲೆಯಲ್ಲಿ ಮೇಷ್ಟ್ರು ಆರನೇ ತರಗತಿಯ ಒಬ್ಬ ವಿದ್ಯಾರ್ಥಿಯನ್ನು ಕರೆದು, 'ನಾಳೆ ನೋಟಿಸ್ ಬೋರ್ಡ್‌ಗೆ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಬಗ್ಗೆ ಒಂದು ಪುಟದ ಲೇಖನ ಬರೆದು ತಾ' ಎಂದು ಹೇಳುವರು. ಮೇಷ್ಟ್ರು ಆ ಲೇಖನವನ್ನು ಬರೆಯಲು ಅವನನ್ನೇ ಯಾಕೆ ಆಯ್ಕೆ ಮಾಡುತ್ತಾರೆ? ಅವನಿಂದ ಆ ಕೆಲಸ ಸಾಧ್ಯ ಎಂಬ ಅಂಶವನ್ನು ಅವರು ವಿವಿಧ ಸಂದರ್ಭಗಳಲ್ಲಿ ಗುರುತಿಸಿರಬೇಕಲ್ಲವೇ? ಮೇಷ್ಟ್ರ ಸೂಚನೆಯ ಮೇರೆಗೆ ಅವನು ಬರೆದು ತಂದ ಲೇಖನದಲ್ಲಿ ವಿಷಯ ಚೆನ್ನಾಗಿದೆಯೇ? ಅದನ್ನು ಚೆನ್ನಾಗಿ ಪ್ರಸ್ತುತಪಡಿಸಿದ್ದಾನೆಯೇ? ಅವನಿಗೆ ಹಾಗೆ ಬರವಣಿಗೆ ಮಾಡುವುದರಲ್ಲಿ ಆಸಕ್ತಿಯಿದೆಯೇ ಎಂಬುದನ್ನೆಲ್ಲ ಅವರು ಹೇಗೆ ಗುರುತಿಸುತ್ತಾರೆ. ವಿದ್ಯಾರ್ಥಿಗಳಲ್ಲಿ ಅಡಗಿರುವ ಇಂತಹ ಅನೇಕ ಪ್ರತಿಭೆಗಳನ್ನು ಗುರುತಿಸುವ ಆಸಕ್ತಿ ಮೇಷ್ಟ್ರಿಗೆ ಅಥವಾ ಹಿರಿಯರಿಗೆ ಇರಬೇಕಾಗುತ್ತದೆ. ಹೀಗೆ ಗುರುತಿಸುವ ಮತ್ತು ವಿದ್ಯಾರ್ಥಿಯನ್ನು ಆ ನಿಟ್ಟಿನಲ್ಲಿ ಬೆಳೆಸುವ ಕಾರ್ಯವೇ ನಿಜವಾದ ಶಿಕ್ಷಣವಾಗಿರುತ್ತದೆ. ಇಲ್ಲಿ ಮೌಲ್ಯಮಾಪನ ಪ್ರಕ್ರಿಯೆಯು ಅತ್ಯಂತ ನಿಧಾನಗತಿಯಲ್ಲಿ ಸಾಗುವಂತಹುದು.

ಈ ಗುರುತಿಸುವಿಕೆ ಮತ್ತು ಪ್ರೋತ್ಸಾಹಕ್ಕೆ ಮೂಲಸ್ರೋತವಾಗಿ ಬೇಕಾಗಿರುವುದು ಪ್ರೀತಿ. ಮಕ್ಕಳ ಪ್ರತಿಭೆಯನ್ನು ಸೂಕ್ಷ್ಮವಾಗಿ ಗುರುತಿಸಿ ಆ ನಿಟ್ಟಿನಲ್ಲಿ ತುಸು ಗದರಿಯಾದರೂ ಅವರು ಬೆಳೆಯುವಂತೆ ಮಾಡುವುದು ವಿದ್ಯಾರ್ಥಿಗಳ ಮೇಲಿನ ಪ್ರೀತಿ.

ಶಾಲೆಗಳಲ್ಲಿ ನಡೆಯುವ ಪರೀಕ್ಷೆ ಮತ್ತು ಮೌಲ್ಯಮಾಪನದ ಮಾತು ಹಾಗಿರಲಿ. ಮಕ್ಕಳ ಮೌಲ್ಯಮಾಪನವು ನ್ಯಾಯತೀರ್ಪು ಕೊಟ್ಟಂತೆ ಕಟುವಾಗಿ, ಅವರನ್ನು ನೋಯಿಸಬಾರದು. ಅದು ಶಾಲೆಯಲ್ಲಾದರೂ ಸರಿ, ಮನೆಯಲ್ಲಾದರೂ ಸರಿ. ಇದೀಗ ಶಾಲೆಯೇ ಮನೆಗೆ ಬಂದಿರುವುದರಿಂದ ಮಕ್ಕಳ ಪಾಲಿಗೆ ಮನೆಯೇ ಎಲ್ಲವೂ ಆಗಿದೆ. ಅಪ್ಪ ಅಮ್ಮನ 'ನಿಗಾ' ಬಿಗಿ ಆಗಿರುವುದರಿಂದ, ಎಳೆಯರ ಕಿತಾಪತಿಗಳಿಗೆ, ಆ ಮೂಲಕ ಆಸಕ್ತಿಗಳಿಗೆ ಅವಕಾಶ ದೊರೆಯದೇ ಉಸಿರುಗಟ್ಟಿದಂತಾಗಿರಬಹುದು. ಆದ್ದರಿಂದ ಅವರಾಗಿಯೇ ಅರಳಲು ಒಂದಷ್ಟು ಸಮಯವನ್ನು ಕೊಟ್ಟು ನೋಡುವುದು ಅನಿವಾರ್ಯವಾಗಿದೆ.

ನಿಜಕ್ಕೂ ಅವರ ಆಸಕ್ತಿಗಳೇನು ಎಂಬ ನಿಟ್ಟಿನಲ್ಲಿ ಅವರ ಮೌಲ್ಯಮಾಪನವನ್ನೂ ಹೆತ್ತವರೇ ಮಾಡಬೇಕು. ಮಕ್ಕಳ ಆಸಕ್ತಿಗಳನ್ನು ಮುಂದಕ್ಕೆ ಅವರು ಆರಿಸಿಕೊಳ್ಳುವ ವೃತ್ತಿಯೊಂದಿಗೆ ಜೋಡಿಸಿ ನೋಡುವುದು ಸರಿಯಲ್ಲ. ಉದಾಹರಣೆಗೆ, 'ನೀನು ಹೀಗೆ ಕಬಡ್ಡಿ ಆಡುತ್ತಲೇ ಇದ್ದರೆ, ಅದರಿಂದ ಏನೂ ಜೀವನಾದಾಯ ಗಿಟ್ಟುವುದಿಲ್ಲ' ಎಂದು ಬೈಯುವುದು ಸರಿಯಲ್ಲ. ವೃತ್ತಿಯತ್ತಲೂ ಗಮನ ಹರಿಸಲು ಸಮಯ ಹೊಂದಿಸಿಕೊಳ್ಳುವುದನ್ನು ಕಲಿಸಬೇಕಷ್ಟೆ.

ಶಾಲಾ ದಿನಗಳು ಅನಿಶ್ಚಿತವಾಗಿರುವ ಈ ಸಂದರ್ಭದಲ್ಲಿ ಮಕ್ಕಳೊಡನೆ ಇಂತಹ ಮಾತುಕತೆ ಆಡುವುದು ಮುಖ್ಯವಾಗಿದೆ.

**ಪ್ರತಿಕ್ರಿಯಿಸಿ: feedback@sudha.co.in**